ತುಂಗಭದ್ರಾ ಬಲದಂಡೆ ಕೆಳಮಟ್ಟದ ನಾಲೆ ವಿಷಯದ ಬಗ್ಗೆ.

೨೨೬೯. ಶ್ರೀ ಸಿ.ಎಂ. ರೇವಣ್ಣ ಸಿದ್ದಯ್ಯ (ಸಿರಗುಪ್ಪ).—ಮಾನ್ಯ ಕಂದಾಯ, ಯೋಜನೆ ಹಾಗೂ ಜಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಬಲದಂಡೆ ಕೆಳಮಟ್ಟ ಕಾಲುವೆಯಡಿ ಸತತ ನೀರಾವರಿ ಪ್ರದೇಶದ ವಿಸ್ತೀರ್ಣ ಎಷ್ಟು ?

ಆ) ಈ ಪ್ರದೇಶದಲ್ಲಿ ಬೆಳೆಯಲು ನಿಗಧಿಯಾಗಿರುವ ಬೆಳೆಗಳಾವುವು ?

ಇ) ಕಳೆದ ಮೂರು ವರ್ಷಗಳಿಂದ ಕಬ್ಬು ಬೆಳೆಯು ಬೇಕೆಂದಿದ್ದರೆ ಇದಕ್ಕೆ ಅಗತ್ಯ ವಿರುವಷ್ಟು ದಿನ ನೀರು ಪೂರೈಸಲಾಗಿದೆಯೇ ?

ಈ) ಈ ಪ್ರದೇಶದ ಮೂರನೇ ಎರಡು ಭಾಗದಷ್ಟು ಕಬ್ಬು ಬೆಳೆಯದಿದ್ದರೆ ದಂಡ ವಿಧಿಸುವ ಕಾನೂನು ಇದೆಯೆ ?

ಉ) ಹಾಗಿದ್ದಲ್ಲಿ, ನಿಗಧಿಯಿರುವಷ್ಟು ದಿನ ನೀರು ಪೂರೈಸಿದಾಗ ಕಬ್ಬು ಬೆಳೆಯುವುದು ಸಾಧ್ಯವೆ?

ಊ) ಇಂತಹ ಪ್ರಸಂಗದಲ್ಲಿ ಇತರೆ ಬೆಳೆ ಬೆಳೆದ ರೈತರಿಗೆ ದಂಡ ಹಾಕಿರುವುದು ನಿಜವೇ ?

ಋ) ಹಾಗಿದ್ದಲ್ಲಿ, ದಂಡ ಹಾಕುವುದನ್ನು ತಪ್ಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ? ಹಾಗಿದ್ದಲ್ಲಿ ಯಾವಾಗಿನಿಂದ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯ ಪ್ರಕಾರ ೧೫,೫೬೬ ಎಕರೆಗಳು.

ಆ) ಮೂರನೇ ಎರಡು ಭಾಗದಷ್ಟು ಪ್ರದೇಶದಲ್ಲಿ ಕಬ್ಬು ಬೆಳೆ ಮತ್ತು ಮೂರನೇ ಒಂದು ಭಾಗದಷ್ಟು ಪ್ರದೇಶದಲ್ಲಿ ಭತ್ತ ಬೆಳೆಯಲು ನಿಗಧಿಪಡಿಸಲಾಗಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಜೂನ್ ಮಾಹೆಯ ೧೦ನೇ ತಾರೀಖಿನಿಂದ ಮೇ ಮಾಹೆ ೧೦ನೇ ತಾರೀಖಿನವರೆಗೆ ನೀರಂ ನೀಡಲಾಗುವುದೆಂದು ಪ್ರಕಟಿಸಲಾಗಿದೆ. ನೀರು ಒದಗಿಸಿದ ಅವಧಿಯ ವಿವರಗಳು :

೧೯೮೫-೮೬	...	೨೦-೬-೮೫ ರಿಂದ ೧೬-೪-೮೬
೧೯೮೬-೮೭	...	೧೬-೬-೮೬ ರಿಂದ ೧೮-೪-೮೭
೧೯೮೭-೮೮	...	೧೮-೬-೮೭ ರಿಂದ ೨೧-೩-೮೮

ಈ) ಕಬ್ಬು ಬೆಳೆಯದೆ ಭತ್ತ ಬೆಳೆದರೆ ದಂಡ ವಿಧಿಸಲು ಕಾನೂನು ಇದೆ (ಬೆಳೆ ಉಲ್ಲಂಘನೆಗೆ)

ಉ) ನೀರು ಸರಬರಾಜು ಮಾಡಲಾಗದ ಅವಧಿ ಬಹಳ ಕಡಿಮೆಯಾಗಿದ್ದು ಮಣ್ಣಿನಲ್ಲಿರುವ ತೇವಾಂಶದಿಂದ ಕಬ್ಬಿನ ಬೆಳೆ ಫಸಲಿಗೆ ಬರಲು ಸಾಧ್ಯ ಹಾಗೂ ಕಬ್ಬಿನ ಬೆಳೆಗೆ ಹಾನಿಯಾಗಿರುವುದಿಲ್ಲ.

ಊ) ನಿಗದಿಪಡಿಸಿದ ಕಬ್ಬು ಬೆಳೆ ಬೆಳೆಯುವ ಪ್ರದೇಶದಲ್ಲಿ ಬೆಳೆ ಉಲ್ಲಂಘನೆಯಾಗಿ ಭತ್ತದ ಬೆಳೆ ಬೆಳೆದಿದ್ದಲ್ಲಿ ಮಾತ್ರ ದಂಡ ಕರ ವಿಧಿಸಲಾಗಿದೆ.

ಋ) (ಊ)ಗೆ ಉತ್ತರ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಎಂ. ರೇವಣ ಸಿದ್ದಯ್ಯ.— ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಹೆನೇ ಪ್ರಶ್ನೆಗೆ ಮಾನ್ಯ ಸಚಿವರು ನೀರು ಸರಬರಾಜು ಮಾಡಲಾಗದ ಅವಧಿ ಬಹಳ ಕಡಿಮೆಯಾಗಿದೆ ಎಂದು ಹೇಳಿದ್ದಾರೆ ನೀರು ಸರಬರಾಜು ಎರಡು ತಿಂಗಳಷ್ಟು ಅವಧಿಯಲ್ಲಿ ಕೊಟ್ಟಿರಲಿಲ್ಲ. ಎರಡು ತಿಂಗಳು ನೀರು ಕೊಡದೆ ಹೋದರೆ ಕಬ್ಬು ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ನಮ್ಮ ಬಳ್ಳಾರಿ ಜಿಲ್ಲೆ ಉಷ್ಣ ಪ್ರದೇಶವಾಗಿರುವುದರಿಂದ ಎರಡು ತಿಂಗಳು ನೀರು ಸರಬರಾಜು ಇಲ್ಲದಿದರೆ ಬೆಳೆಗೆ ಹಾನಿಯಾಗುತ್ತದೆ.

ಬ್ಯಾರಿಯಲ್ಲಿ ಉಷ್ಣಾಂಶ ಳಳ ಡಿಗ್ರಿ ಸೆಲ್ಸಿಯಸ್ ಇದ್ದು ಇರುತ್ತದೆ. ಇದರಲ್ಲಿ ರೈತರದೇನೂ ತಪ್ಪಿಲ್ಲ. ರೈತರುಗಳದ್ದು ತಪ್ಪು ಇಲ್ಲವೆಂದರೂ ಅವರುಗಳಿಗೆ ದಂಡ ಹಾಕುವುದು ಸರಿಯಲ್ಲ. ತಾವು ಇದರ ಬಗ್ಗೆ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡು ತಿಂಗಳು ನೀರು ಸರಬರಾಜು ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸರಿಯಲ್ಲ, ಒಂದು ತಿಂಗಳು ಮಾತ್ರ ನೀರು ಸರಬರಾಜು ಆಗಿರಲಿಲ್ಲ. ಇದನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಆಗಲೇ ಮಾನ್ಯ ಉದಾಸಿಯವರು ಪ್ರಶ್ನೆ ಕೇಳಬೇಕೆಂದು ಹೇಳಿದ್ದೆ, ಮಾನ್ಯ ರೇವಣಸಿದ್ದಯ್ಯನವರ ಹೆಸರನ್ನು ನಾನು ಕರೆಯಬೇಕಾಗಿತ್ತು. ನಮ್ಮ ಆಫೀಸ್‌ನವರ ಬೇಜವಾಬ್ದಾರಿಯಿಂದ ಈ ರೀತಿ ಆಯಿತು. ಇನ್ನು ಮುಂದೆ ಆಫೀಸ್‌ನವರು ಸರಿಪಡಿಸಿಕೊಳ್ಳುತ್ತಾರೆ.

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕನ್ನಡ ಪಂಡಿತ್ ಪದವಿ ಶಿಕ್ಷಣ.

೨೧೮೨. ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಎರವಲು ಮೂಲಕ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ೪ ವರ್ಷಗಳ ಕನ್ನಡ ಪಂಡಿತ ಪದವಿ ಶಿಕ್ಷಣ ಕೊಡುತ್ತಿರುವುದು ನಿಜವೇ ಈಚೆಗೆ ಈ ರೀತಿ ಶಿಕ್ಷಣ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲೆಗೆ ವರ್ಗಾಯಿಸಿ ಕೊಡುವುದು ಸರ್ಕಾರಕ್ಕೆ ತಿಳಿದಿದೆಯೆ?

ಆ) ಕನ್ನಡ ಪಂಡಿತ ಪದವಿ ಜೊತೆಗೆ ಬಿ. ಇಡಿ ಶಿಕ್ಷಣವನ್ನು ಸ್ವಂತ ಖರ್ಚಿನಲ್ಲಿ ಪಡೆದಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಂಬಡ್ತಿಯಲ್ಲಿ ಶೇ. ೨೫ ರಷ್ಟನ್ನು ಮೀಸಲಾಗಿಡಲು ಸರ್ಕಾರ ನಿರ್ಧರಿಸುವುದೇ ?

ಇ) ರಾಜ್ಯದಲ್ಲಿ ಪ್ರಾಚೀನ ಪರಂಪರೆಯನ್ನು ಪ್ರತಿನಿಧಿಸುವ ಈ ಏಕೈಕ ಕನ್ನಡ ಪಂಡಿತ ಪದವಿ ಶಿಕ್ಷಣ ವ್ಯವಸ್ಥೆಯನ್ನು ರಾಜ್ಯದ ವಿಶ್ವ ವಿದ್ಯಾನಿಲಯಕ್ಕೆ ವಹಿಸಿಕೊಡಲು ಸರ್ಕಾರ ಆಲೋಚಿಸುವುದೆ, ಮತ್ತು ಈ ಶಿಕ್ಷಣ ಸಂಸ್ಥೆಯನ್ನು ಕಾಲೇಜು ಮಟ್ಟಕ್ಕೆ ಏರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಈ) ಸದರಿ ಕನ್ನಡ ಪಂಡಿತರಿಗೆ, ತಮಿಳುನಾಡು ಸರ್ಕಾರವು ತಮಿಳು ಭಾಷಾ ಪಂಡಿತ ಅಧ್ಯಾಪಕರಿಗೆ ಕೊಡುವ ಸವಲತ್ತುಗಳನ್ನು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ. ಹಾಗಿದ್ದಲ್ಲಿ ಯಾವಾಗ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ನಿಜ ತಿಳಿದಿದೆ.

ಆ) ಪರಿಶೀಲಿಸಲಾಗುವುದು.

ಇ) ಈ ಪರಿಶೀಲನೆ ಸದ್ಯಕ್ಕೆ ಇರುವುದಿಲ್ಲ.

ಈ) ತಮಿಳುನಾಡು ಸರ್ಕಾರದ ಸವಲತ್ತುಗಳ ಬಗ್ಗೆ ನಮ್ಮಲ್ಲಿ ಮಾಹಿತಿ ಇರುವುದಿಲ್ಲವಾದ್ದರಿಂದ ಈ ಮಾಹಿತಿಯನ್ನು ತರಿಸಲಾಗುವುದು.

ಶ್ರೀ ಪಿ. ಎಂ. ಚಿಕ್ಕ ಬೋರಯ್ಯ —ಮಾನ್ಯ ಅಧ್ಯಕ್ಷರೇ. ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುವಾಗ ಕನಿಷ್ಠ ವಿದ್ಯಾರ್ಹತೆ ಎಸ್. ಎಸ್. ಎಲ್. ಸಿ. ಮತ್ತು ಟಿ. ಸಿ. ಹೆಚ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕೆಂದು ಕಾನೂನು ಇದೆ. ಈ ರೀತಿ ಟಿ. ಸಿ. ಹೆಚ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾ ಕೆಲಸ ಮಾಡುತ್ತಿರುವವರನ್ನು ಇನ್ನೂ ಹೆಚ್ಚಿನ ಶಿಕ್ಷಣ ಕೊಡುವುದಕ್ಕೆ ಆಯ್ಕೆ ಮಾಡಿ ಅವರುಗಳಿಗೆ ಹೆಚ್ಚಿನ ಶಿಕ್ಷಣವನ್ನು ಕೊಟ್ಟು ಪುನಃ ಅದೇ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರುಗಳನ್ನಾಗಿ ಮಾಡುವುದರಿಂದ, ಏನು ಪ್ರಯೋಜನ ? ಅದರಿಂದ ಸಮಾಜಕ್ಕೆ ಏನಾದರೂ ಅನುಕೂಲವಾಗುತ್ತದೆಯೇ ಎನ್ನುವುದು ಒಂದು ಪ್ರಶ್ನೆ. ಈ ಬಗ್ಗೆ ಮತ್ತೊಂದು